"ಇಲ್ಲ" ಎಂದೆ.

"ಮತ್ತೆ, ಹೇಗೆ ಹುಡುಕುವಿರಿ?"

"ಇಲ್ಲಿನ ಸುಮಾರು ಹಳ್ಳಿಗಳಲ್ಲಿರುವವರೆಲ್ಲ ಆರ್ಯರು ಎಂದರು. ಅವರನ್ನು ನೋಡಲು ಬಂದೆವು."

"ಹೌದು. ಇದು ಆರ್ಯ ಕಣಿವೆ ಎಂದಮೇಲೆ ಇಲ್ಲಿರುವವರೆಲ್ಲ ಆರ್ಯರೆ ಆಗಿರಬೇಕಲ್ಲವೆ? ನಾನೂ ಇಲ್ಲಿರುವೆ ಅಂದರೆ ನಾನೂ ಆರ್ಯನಲ್ಲವೆ? ಈಗ ನೀವೂ ಇಲ್ಲಿಯೆ ಇರುವಿರಿ. ನೀವೂ ಆರ್ಯರೆ ಅಲ್ಲವೆ?" ಎಂದರು. ಅವರ ಮಾತಿನಲ್ಲಿ ಏನೋ ಒಳಾರ್ಥವಿದ್ದಂತೆ ಕಂಡಿತು. ಅದನ್ನು ತಿಳಿಯಲು ಕೇಳಿದೆ.

"ಆದರೆ ನೀವು ಬೌದ್ಧ ಮುನಿ?"

"ಆಗಿನ ಕಾಲದ ಆರ್ಯರು ಇಂದು ಬೌದ್ಧರಾಗಿರಬಾರದೆ?"

ಅವರ ಪ್ರಶ್ನೆಗೆ ನನ್ನಲ್ಲಿ ಉತ್ತರವಿರಲಿಲ್ಲ. ಆದರೆ ಪ್ರಶ್ನೆ ನನಗೆ ಇಷ್ಟವಾಯಿತು. ಹಾಗೆಂದೆ ಹೇಳಿದೆ.

"ಕ್ಷಮಿಸಬೇಕು. ನಿಮ್ಮ ಪ್ರಶ್ನೆ ನನ್ನನ್ನೂ ಕಾಡಿತ್ತು" ಎಂದು ನನ್ನ ದೃಷ್ಟಿಯಲ್ಲಿ ಆರ್ಯರು ಎಂದರೆ ಯಾರು ಎಂಬ ಬಗ್ಗೆ ಹಾಗೂ ಈ ಜಿಜ್ಞಾಸೆ ಹುಟ್ಟಿಕೊಂಡ ಚರಿತ್ರೆಯ ಬಗ್ಗೆಯೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ ಹೇಳಿದೆ. ನನ್ನ ಮಾತುಗಳನ್ನು ಆಲಿಸಿದ ಅವರ ಮುಖದಲ್ಲಿ ತಕ್ಷಣ ಬದಲಾವಣೆ ಕಂಡಿತು. ಅವರು ನನ್ನನ್ನೇ ನೋಡುತ್ತ ಒಪ್ಪಿದೆ, ಹೌದು ಎನ್ನುವಂತೆ ತಲೆದೂಗಿದರು. ನಮ್ಮೊಂದಿಗೆ ಸಂಭಾಷಣೆ ಮುಂದುವರಿಸುವ ಇಚ್ಛೆ ಅವರ ಮುಖದಲ್ಲಿ ಕಂಡಿತು. ಆಹ್ವಾನಿಸುವಂತೆ ನಗುತ್ತ,

"ಬನ್ನಿ. ಒಳಗೆ ಕೂತು ಮಾತನಾಡೋಣ" ಎಂದು ವಿಹಾರದ ಕೆಳ ಅಂತಸ್ತಿನ ಬಾಗಿಲು ತೆಗೆದು, ನಮ್ಮನ್ನು ಬರಮಾಡಿಕೊಳ್ಳುತ್ತ ಒಳಹೊಕ್ಕರು. ಒಳಗೆ ದೊಡ್ಡ ಆವರಣ. ಹಸಿರು, ಕೆಂಪು, ಹಳದಿ ಬಣ್ಣಗಳಿಂದ ತುಂಬಿದ ಬುದ್ಧ, ಬೋಧಿಸತ್ವ, ಚೀನೀ ಡ್ರಾಗನ್ ಮತ್ತು ಮೈತ್ರೇಯಿ ಬುದ್ಧನ ಚಿತ್ರಗಳು ಸುತ್ತಲೂ ಗೋಡೆಗಳನ್ನು ತುಂಬಿದ್ದವು. ಆವರಣದ ಬಲಗಡೆಗೆ ನಡೆದು ಒಂದು ವಿಶಾಲವಾದ ಕೊಠಡಿಯೊಳಗೆ ಕರೆದೊಯ್ದು ಅಲ್ಲಿ ಕೂಡಲು ಹೇಳಿದರು. ಒಳಗೆ ಪ್ರವೇಶಿಸುತ್ತಿದ್ದಂತೆಯೆ ಆ ಕೊಠಡಿಯೆ ಅವರ ಇಡೀ ಜೀವನ ಎನ್ನುವುದು ಯಾರಿಗೂ ಸ್ಪಷ್ಟವಾಗಿ ಕಾಣುತ್ತಿತ್ತು. ನೆಲದ ಮೇಲೊಂದು ಹಾಸಿಗೆ. ಕೊಠಡಿಯ ಒಂದು ಕಡೆ ಮೇಜು ಮತ್ತು ನಾಲ್ಕು ಕುರ್ಚಿಗಳು. ಮೇಜಿನ ಮತ್ತೊಂದು ಬದಿಯಲ್ಲಿ ಅವರು ಕುಳಿತುಕೊಳ್ಳುವ ಕುರ್ಚಿ, ಅದರ ಮೇಲೆ ಮೆತ್ತನೆಯ ದಿಂಬು. ಆ ಕುರ್ಚಿಯ ಎಡಕ್ಕಿದ್ದ ಸಣ್ಣ ಸ್ಟೂಲಿನ ಮೇಲೆ ಫ್ಲಾಸ್ಕ್, ಕ್ಯಾಮೆರಾ ಮತ್ತು ಟಾರ್ಚ್. ಬಲಗಡೆಗಿದ್ದ ಮತ್ತೊಂದು ಸಣ್ಣ ಮೇಜಿನ ಮೇಲೆ ಒಂದು ಲ್ಯಾಪ್‌ಟಾಪ್. ಅವರ ಎದುರಿಗೆ, ಹಾಸಿಗೆ ಇದ್ದ ಕಡೆಯ ಗೋಡೆಯ ಉದ್ದಕ್ಕೂ ಆರು ಅಡಿಗಳವರೆಗೆ ಜೋಡಿಸಿದ್ದ ಹಲಗೆಯ ಗೂಡುಗಳ ತುಂಬ ಹಲವಾರು ಪುಸ್ತಕಗಳು. ಮತ್ತೊಂದು ಗೋಡೆಗೆ ಹಾಕಿದ್ದ ಮರದ ಬೀರುವಿನಲ್ಲಿ ಅರಿಸಿನ ಬಣ್ಣದ ಬಟ್ಟೆಗಳಲ್ಲಿ ಸುತ್ತಿದ್ದ ಹಳೆಯ ಪುಸ್ತಕಗಳು. ನಾವು ಮೇಜಿನ ಬಳಿ ಇದ್ದ ಕುರ್ಚಿಗಳಲ್ಲಿ ಕೂಡುತ್ತಿದ್ದಂತೆ, ಅವರು ಕೊಠಡಿಯ ಪಕ್ಕದಲ್ಲಿಯೆ ಇದ್ದ ಸಣ್ಣದಾದ ಅಡುಗೆ ಕೋಣೆಗೆ ಹೋಗಿ ನಾಲ್ಕು ಚಹದ ಕಪ್ಪುಗಳನ್ನು ತಂದು ನಮ್ಮ ಎದುರು ಕೂತು, ಫ್ಲಾಸ್ಕ್‌ನಿಂದ ಚಹ ಸುರಿಯತೊಡಗಿದರು. ನಾನು ಮತ್ತೆ ಕೊಠಡಿಯ ಸುತ್ತ ಕಣ್ಣು ಹಾಯಿಸಿದಾಗ ಒಂದು ಮೂಲೆಯಲ್ಲಿ ಟೀವಿ ಕಂಡಿತು.

**(ಮುಂದಿನ ಸಂಚಿಕೆಗೆ)**